SC 6/2024
PW.36

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 6/2024** **ಫ್ರಾ.ಸಾ.36**

**ಚಾ.ಸಾ.50**

| | | |
|---|---|---|
| ಸಾಕ್ಷಿದಾರರ ಹೆಸರು | - | ದಿವ್ಯಜಿತ್ |
| ತಂದೆಯ ಹೆಸರು | - | ರಾಮ |
| ವಯಸ್ಸು | - | 47 ವರ್ಷ |
| ಉದ್ಯೋಗ | - | ವ್ಯಾಪಾರ |
| ವಿಳಾಸ | - | ಕೋಡಿಕಲ್, ಮಂಗಳೂರು. |

ದಿನಾಂಕಃ 01.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ**

ಕೋಡಿಕಲ್ ಮಂಗಳೂರಿನಲ್ಲಿ ನನಗೆ ಸೇರಿದ 15 ಸೆಂಟ್ಸ್ ಜಾಗ ಇದೆ. ಅಲ್ಲಿ ಮೂರು ಅಂತಸ್ತಿನ ಕಟ್ಟಡ ಇದ್ದು, ಒಂದು ಮಹಡಿಯಲ್ಲಿ ತಲಾ ಎರಡರಂತೆ ವಾಸನದ ಮನೆಗಳು ಇದ್ದು, ಒಟ್ಟು ಆರು ಬಾಡಿಗೆಗೆ ಕೊಡುವ ಮನೆಗಳು ಇರುತ್ತವೆ. ಅದರ ಪಕ್ಕದಲ್ಲಿ ನಮ್ಮ ಹೆಂಚಿನ ಹಳೆಯ ಮನೆ, ಮತ್ತು ನಾವು ವಾಸ ಮಾಡುವ ಆರ್ ಸಿ ಸಿ ಮನೆ ಇದೆ. ಮೇಲೆ ಹೇಳಿದ ಮೂರೂ ಮನೆಗಳಿಗೆ ಒಂದೇ ಆವರಣ ಗೋಡೆ ಮತ್ತು Common ಗೇಟ್ ಇರುತ್ತದೆ. ಬಾಡಿಗೆ ಮನೆಯವರಿಗೆ ವಾಹನಗಳನ್ನು ನಿಲ್ಲಿಸಲು ಪಾರ್ಕಿಂಗ್ ವ್ಯವಸ್ಥೆ ಇರುತ್ತದೆ. ಈ ದಿನ ನ್ಯಾಯಾಲಯದಲ್ಲಿ ವಿ.ಸಿ. ಮೂಲಕ ಹಾಜರಿರುವ ಆರೋಪಿಯನ್ನು ಸಾಕ್ಷಿ ನೋಡಿ ತಾನು ಆತನನ್ನು ಈ ಮೊದಲು ನೋಡಿದ್ದೇನೆ ಎಂದು ಹೇಳಿರುತ್ತಾರೆ.

2. ಮೊದಲನೇ ಅಂತಸ್ತಿನ ಎರಡನೇ ಮನೆ ಆಗಸ್ಟ್2023 ರಲ್ಲಿ ಖಾಲಿ ಆಗಿತ್ತು. ಮನೆ ಖಾಲಿ ಇದೆ ಮತ್ತು ಅದನ್ನು ಬಾಡಿಗೆಗೆ ಕೊಡುತ್ತೇವೆ ಎಂದು ನಾವು ವೆಬ್ ಸೈಟ್ ನಲ್ಲಿ ಮಾಹಿತಿ

ಪ್ರಕಟಿಸಿರುತ್ತೇವೆ. ಸದ್ರಿ ಮಾಹಿತಿಯನ್ನು ನೋಡಿ ಐನಾಜ್ ನನಗೆ ಕರೆ ಮಾಡಿ ಆಕೆಗೆ ಮನೆ ಬಾಡಿಗೆಗೆ ಬೇಕು ಎಂದು ತಿಳಿಸಿದ್ದರು. ಆಕೆ ಮನೆಯ ಲೊಕೇಶನ್ ಕೇಳಿದರು. ಆಕೆ ಕರೆ ಮಾಡಿದ ಎರಡು ದಿವಸಗಳ ನಂತರ ಅಫನಾನ್ ಜೊತೆ ಮನೆ ನೋಡಲು ಬಂದಿದ್ದರು. ಮನೆ ನೋಡಿ ಅವರು ಮನೆ ಯನ್ನು ನಮ್ಮ ಒಬ್ಬ ಅಂಕಲ್ ನೋಡಿ ಅವರು ಅಂತಿಮ ತೀರ್ಮಾನ ಮಾಡುತ್ತಾರೆ ಎಂದು ಹೇಳಿದರು. ಇದಾದ ಎರಡು ದಿವಸಗಳ ನಂತರ ಐನಾಜ್ ಮತ್ತು ಅವರು ಹೇಳಿದ ಅಂಕಲ್ ಜೊತೆ ಮನೆ ನೋಡಲು ಬಂದಿದ್ದರು. ಆಕೆಯ ಜೊತೆ ಬಂದಿದ್ದ ಅಂಕಲ್ ಈ ದಿನ ನ್ಯಾಯಾಲಯದಲ್ಲಿ ವಿ.ಸಿ. ಮೂಲಕ ಹಾಜರಿರುವ ಆರೋಪಿಯೆ ಆಗಿರುತ್ತಾರೆ. ಅವರು ಮನೆಯನ್ನು ನೋಡಿ ಒಪ್ಪಿಕೊಂಡು ಮನೆ ಬಾಡಿಗೆಗೆ ಬೇಕು ಎಂದು ತಿಳಿಸಿದ್ದರು. ಸದ್ರಿ ಅಂಕಲ್ ಮನೆಯ ಬಾಡಿಗೆ ಕರಾರನ್ನು ತಯಾರು ಮಾಡಿ, ನಾವು ಅದನ್ನು ಓದಿ ನೋಡಿ ಸಹಿ ಮಾಡುತ್ತೇವೆ ಎಂದು ಹೇಳಿದರು.

3. ದಿನಾಂಕ 23.08.2023 ರಂದು ನಾನು ಮಂಗಳೂರಿನ ಸ್ಟೇಟ್ ಬ್ಯಾಂಕ್ ನಲ್ಲಿರುವ ಆತ್ಮಶಕ್ತಿ ಕೋ-ಆಪರೇಟಿವ್ ಸೊಸೈಟಿಯಲ್ಲಿ 50 ರೂಪಾಯಿ ಮುಖ ಬೆಲೆಯ ಸ್ಟಾಂಪ್ ಪೇಪರನ್ನು ಮನೆಯ ಬಾಡಿಗೆ ಕರಾರು ತಯಾರಿಸಲು ಖರೀದಿ ಮಾಡಿರುತ್ತೇನೆ. ದಿನಾಂಕ 25.08.2023 ರಂದು ನಾನು ಕರಾರನ್ನು ಬೆರಳಚ್ಚು ಮಾಡಿಸಿರುತ್ತೇನೆ. ಅದೇ ದಿನ ಐನಾಜ್ ಮತ್ತು ನ್ಯಾಯಾಲಯದ ಮುಂದೆ ವಿ.ಸಿ. ಮೂಲಕ ಹಾಜರಿರುವ ಆರೋಪಿ ಬಂದಿದ್ದರು. ಅವರು ಕರಾರನ್ನು ಓದಿದರು, ನಂತರ ಐನಾಜ್ ಕರಾರಿಗೆ ಸಹಿ ಮಾಡಿರುತ್ತಾರೆ. ಕರಾರಿಗೆ ನಾನು ಸಹಾ ಸಹಿ ಮಾಡಿರುತ್ತೇನೆ. ಆಕೆ ಮನೆಯ ಬಾಡಿಗೆಯನ್ನು ದಿನಾಂಕ 01.09.2023 ರಿಂದ ವಾಸಕ್ಕೆ ಪಡೆದರು. ಸದ್ರಿ ಮನೆಯಲ್ಲಿ ಐನಾಜ್ ಮತ್ತು ಅಫನಾನ್ ಇಬ್ಬರು ವಾಸವಿದ್ದರು. ದಿನಾಂಕ 01.09.2023 ರಂದು ನನ್ನ ಖಾತೆಗೆ ಅವರು ರೂ.20,000/- ಹಾಕಿರುತ್ತಾರೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ತಲಾ ರೂ.8,000/- ಗಳನ್ನು ನನ್ನ ಖಾತೆಗೆ ಹಾಕಿರುತ್ತಾರೆ.

4. ಐನಾಜ್ ಏರ್ ಇಂಡಿಯಾದಲ್ಲಿ ಕೆಲಸ ಮಾಡುತ್ತಿದ್ದು, ಆಕೆಯನ್ನು ಕರೆದುಕೊಂಡು ಹೋಗಲು ಕಂಪನಿಯಿಂದ ಕಾರು ಬರುತ್ತಿತ್ತು. ಐನಾಜ್ ಗೆ ಕೆಲಸ ನಿರ್ಧಿಷ್ಟ ಸಮಯ ಇರಲಿಲ್ಲ. ಅಫನಾನ್ ಲಾಜಿಸ್ಟಿಕ್ ಕಾಲೇಜಿನಲ್ಲಿ ಕಲಿಯುತ್ತಿದ್ದಳು. ಆಕೆ ಬೆಳಿಗ್ಗೆ 8-30 ರ ಸಮಯದಲ್ಲಿ ಮನೆಯಿಂದ ಹೋಗುತ್ತಿದ್ದಳು. ವಾಪಸ್ಸು ಸಂಜೆ 6 ರ ಸಮಯದಲ್ಲಿ ಬರುತ್ತಿದ್ದಳು. ಹಗಲು ಸಮಯದಲ್ಲಿ ಮನೆಯಲ್ಲಿ ಒಮ್ಮೊಮ್ಮೆ ಐನಾಜ್ ಇರುತ್ತಿದ್ದಳು. ಆ ಸಮಯದಲ್ಲಿ ಆರೋಪಿ ಮನೆಗೆ ಬರುತ್ತಿದ್ದರು, ಆ ರೀತಿ ಬಂದು ತುಂಬಾ ಹೊತ್ತು ಮನೆಯಲ್ಲಿ ಇದ್ದು ನಂತರ ಹೋಗುತ್ತಿದ್ದರು. ಒಮ್ಮೊಮ್ಮೆ ಆರೋಪಿ ಒಬ್ಬರೇ ಮನೆಯಿಂದ ಹೋಗುತ್ತಿದ್ದನು. ಒಮ್ಮೊಮ್ಮೆ ಐನಾಜ್ ಜೊತೆಯಲ್ಲಿ ಮನೆಯಿಂದ ಹೊರಗೆ ಹೋಗುತ್ತಿದ್ದರು. ಐನಾಜ್ ಮತ್ತು ಅಫನಾನ್ ಬಳಿ ಓಡಾಡಲು ಒಂದು ಜ್ಯುಪಿಟರ್ ದ್ವಿಚಕ್ರ ವಾಹನ ಇತ್ತು. ಅದನ್ನು ಒಮ್ಮೊಮ್ಮೆ ಐನಾಜ್ ಮತ್ತು ಒಮ್ಮೊಮ್ಮೆ ಅಫನಾನ್ ತೆಗೆದುಕೊಂಡು ಹೋಗುತ್ತಿದ್ದರು, ಒಮ್ಮೊಮ್ಮೆ ಇಬ್ಬರೂ ಒಟ್ಟಿಗೆ ಹೋಗುತ್ತಿದ್ದರು. ಅದರ ಕೀಯನ್ನು ಮನೆಯ ಪಕ್ಕದ ಪಾರ್ಕಿಂಗ್ ಸ್ಥಳದಲ್ಲಿ ಇಡುತ್ತಿದ್ದರು.

5. ಐನಾಜ್ ಮತ್ತು ಅಫನಾನ್ ಸಾಮಾನ್ಯವಾಗಿ ರಜಾ ದಿನಗಳಲ್ಲಿ ಉಡುಪಿಯಲ್ಲಿರುವ ಅವರ ಮನೆಗೆ ಹೋಗುತ್ತಿದ್ದರು. ಕೊನೆಯದಾಗಿ ದಿನಾಂಕ 10.11.2023 ಶುಕ್ರವಾರದಂದು ಅವರು ಕಾರಿನಲ್ಲಿ ಬಾಡಿಗೆ ಮನೆಯಿಂದ ಹೋಗಿರುತ್ತಾರೆ. ನಂತರ ಭಾನುವಾರದ ದಿವಸ ನಾನು ಟಿವಿ ನೋಡಿದಾಗ ಐನಾಜ್, ಅಫನಾನ್, ಅವರ ತಮ್ಮ ಮತ್ತು ತಾಯಿಯ ಕೊಲೆಯಾಗಿದೆ ಎಂದು ಗೊತ್ತಾಯಿತು.

6. ನಾನು ಇ-ಸ್ಟಾಂಪು ಖರೀದಿಸಿದ ರಶೀದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಕಡತದಲ್ಲಿರುವ ರಶೀದಿಯ ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಹಂತದಲ್ಲಿ ಆರೋಪಿ ಪರ ಮಾನ್ಯ ವಕೀಲರು ಸದ್ರಿ ದಾಖಲೆ ಜೆರಾಕ್ಸ್ ಪ್ರತಿ ಇದ್ದು, ನಿಶಾನೆ ಮಾಡಲು ಬರುವುದಿಲ್ಲ ಎಂದು ತಕರಾರು ಮಾಡಿರುತ್ತಾರೆ. ಸದ್ರಿ ತಕರಾರಿಗೆ ಒಳಪಟ್ಟು ಸದ್ರಿ ದಾಖಲೆಯನ್ನು ನಿಪಿ-200 ಎಂದು

ಗುರುತಿಸಲಾಯಿತು. ನನ್ನ ಮತ್ತು ಐನಾಜ್ ನಡುವೆ ಆದ ಬಾಡಿಗೆ ಕರಾರಿನ ಮೂಲ ಪ್ರತಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದ್ರಿ ದಾಖಲೆ ನೋಡಿ ಗುರುತಿಸಿ ಅದಕ್ಕೆ ನಾನು ಮತ್ತು ಐನಾಜ್ ಪ್ರತೀ ಪುಟಕ್ಕೆ ಸಹಿ ಮಾಡಿರುತ್ತೇವೆ. ಸಾಕ್ಷಿ ಸದ್ರಿ ದಾಖಲೆ ಯನ್ನು ಗುರುತಿಸಿದ ಕಾರಣ ಅದನ್ನು ನಿಪಿ-201 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-201(ಎ) ಎಂದು ಗುರುತಿಸಲಾಯಿತು. ಐನಾಜ್ ನನ್ನ ಸಮಕ್ಷಮ ಸಹಿ ಮಾಡಿದ್ದು, ಆಕೆಯ ಸಹಿಯನ್ನು ಗುರುತಿಸುತ್ತೇನೆ. ಆಕೆಯ ಸಹಿಯನ್ನು ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-201(ಬಿ) ಎಂದು ಗುರುತಿಸಲಾಯಿತು.

7. ದಿನಾಂಕ 19.11.2023 ರಂದು ಪೋಲಿಸರು ಅವರ ವಾಹನದಲ್ಲಿ ಒಬ್ಬ ಮುಸುಕುಧಾರಿ ವ್ಯಕ್ತಿಯನ್ನು ನಮ್ಮ ಮನೆಯ ಕಂಪೌಂಡ್ ಗೆ ಕರೆದುಕೊಂಡು ಬಂದಿದ್ದರು. ಪೋಲಿಸರು ಸದ್ರಿ ವ್ಯಕ್ತಿಯ ಮುಸುಕನ್ನು ತೆಗೆದು ನನಗೆ ತೋರಿಸಿದರು. ನಾನು ಸದ್ರಿ ವ್ಯಕ್ತಿಯನ್ನು ನೋಡಿ ಆತ ಐನಾಜ್ ಮನೆಗೆ ಬರುತ್ತಿದ್ದ ವ್ಯಕ್ತಿ ಎಂದು ಗುರುತಿಸಿದೆನು. ಸದ್ರಿ ವ್ಯಕ್ತಿ ಪಾರ್ಕಿಂಗ್ ಸ್ಥಳದಲ್ಲಿದ್ದ ಐನಾಜ್ ಳ ಜ್ಯುಪಿಟರ್ ದ್ವಿಚಕ್ರ ವಾಹನವನ್ನು ತೋರಿಸಿದರು. ಪಾರ್ಕಿಂಗ್‌ನಲ್ಲಿದ್ದ ದ್ವಿಚಕ್ರ ವಾಹನದ ಕೀಯನ್ನು ನಾನು ಪೋಲಿಸರಿಗೆ ಕೊಟ್ಟೆನು. ಪೋಲಿಸರು ಸದ್ರಿ ಕೀ ಯನ್ನು ಕರೆದುಕೊಂಡು ಬಂದಿದ್ದ ವ್ಯಕ್ತಿಗೆ ಕೊಟ್ಟರು, ಸದ್ರಿ ವ್ಯಕ್ತಿ ಕೀಯನ್ನು ಉಪಯೋಗಿಸಿ ದ್ವಿಚಕ್ರ ವಾಹನದ ಡಿಕ್ಕಿಯನ್ನು ತೆಗೆದರು. ಡಿಕ್ಕಿಯಲ್ಲಿ ಫಾರಂ ನಂ-29, 30, ಆಧಾರ್ ಕಾರ್ಡ್ ಪ್ರತಿ ಮತ್ತು ವರ್ಗಾವಣೆ ನಮೂನೆ ಇದ್ದವು. ಫಾರಂ ನಂ.29 ಮತ್ತು 30 ರಲ್ಲಿ ಪ್ರವೀಣ್ ರವರ ಸಹಿಗಳು ಇದ್ದವು. ವರ್ಗಾವಣೆ ನಮೂನೆಯಲ್ಲಿ ಐನಾಜ್ ಳ ಸಹಿಗಳು ಇದ್ದವು. ಪೋಲಿಸರು ಸದ್ರಿ ದಾಖಲೆಗಳನ್ನು ಲಕೋಟೆಯಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಸದ್ರಿ ದಾಖಲೆಗಳನ್ನು ಮತ್ತು ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-183 ರಿಂದ 185 ಮತ್ತು ಮುದ್ದೆಮಾಲು-44 ಎಂದು ಗುರುತಿಸಲಾಗಿದೆ.

8. ನಂತರ ಸದ್ರಿ ವ್ಯಕ್ತಿ ದ್ವಿಚಕ್ರ ವಾಹನದ ಡಿಕ್ಕಿಯಿಂದ ಮೂರು ಕಾರ್ಡ್‌ಗಳನ್ನು, ಆರ್.ಸಿ., ಅಫನಾನ್ ಡ್ರೈವಿಂಗ್ ಲೈಸೆನ್ಸ್ ಮತ್ತು ಅಫನಾನ್ ನ ಆಸ್ಪತ್ರೆಯ ಕಾರ್ಡ್‌ಗಳನ್ನು ತೆಗೆದುಕೊಟ್ಟನು. ತನಿಖಾಧಿಕಾರಿ ಅವುಗಳನ್ನು ಲಕೋಟೆಯಲ್ಲಿ ಹಾಕಿ ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿ ಅಮಾನತ್ತು ಪಡಿಸಿಕೊಂಡರು. ಸದ್ರಿ ದಾಖ್ಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-186 ರಿಂದ 188 ಎಂದು ಗುರುತಿಸಲಾಗಿದೆ. ದ್ವಿಚಕ್ರ ವಾಹನದ ನೋಂದಣಿ ಸಂ.ಕೆಎ-19-ಇಪಿ-1123 ಇರುತ್ತದೆ. ಪೋಲಿಸರು ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಂಡರು. ಸದ್ರಿ ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ದಿನ ನ್ಯಾಯಾಲಯದ ಆವರಣದಲ್ಲಿದ್ದ ದ್ವಿಚಕ್ರ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮುದ್ದೆಮಾಲು-45 ಎಂದು ಗುರುತಿಸಲಾಗಿದೆ. ಪೋಲಿಸರು ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿ ನಿಪಿ-189 ಪಂಚನಾಮೆ ಯಲ್ಲಿರುವ ತನ್ನ ಸಹಿ ಗುರುತಿಸಿದ್ದು, ಅದನ್ನು ನಿಪಿ-189(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ಪೋಲಿಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-193 ರಿಂದ 199 ಎಂದು ಗುರುತಿಸಲಾಗಿದೆ. ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿದ್ದಾರೆ. ನಂತರ ನಾನು ಮನೆಯ ಬಾಡಿಗೆ ಕರಾರನ್ನು ಮಲ್ಪೆ ವೃತ್ತ ನಿರೀಕ್ಷಕರ ಕಚೇರಿಗೆ ತಂದು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.(LADC) ವಕೀಲರಿಂದ:**

ಶ್ರೀ ಆರ್.ಎಸ್. (ALADC) ವಕೀಲರು ಹಾಜರಿದ್ದು, ಶ್ರೀ ಆರ್.ಪಿ.(LADC) ವಕೀಲರು ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿರುವ ಕಾರಣ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ, ಪಾಟಿ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ